ಈ) ನೆಡುತೋಪುಗಳಲ್ಲಿ ಹಾಗೂ ರಸ್ತೆಯಲ್ಲಿ ನೆಟ್ಟ ಗಿಡಗಳನ್ನು ರಕ್ಷಿಸಲು ಇಲಾಖೆಯಿಂ ಅರಣ್ಯ ರಕ್ಷಕರು ಇದ್ದಾರೆ, ಅಲ್ಲದೆ ಕಾವಲುಗಾರರನ್ನು ನೇಮಿಸಿಕೊಳ್ಳಲಾಗಿದೆ. ನೆಡುತೋಪುಗಳ ಸುತ್ತ ಕಂದಕ ವನ್ನು, ತೋಡಿ ಕಲ್ಲಾರು ಸಸಿಗಳನ್ನು ನೆಡಲಾಗಿದೆ. ಬಳ್ಳಾರಿ ಜಾಲಿ ಬೀಜವನ್ನು ಸಹ ಹಾಕಿದೆ. ಕಂದಕ ಗಳನ್ನು ತೋಡಲು ಆಗದ ಕಡೆ ತಂತಿ ಬೇಲಿ ಅಥವಾ ಕಲ್ಲುಗಳ ಗೋಡೆಯನ್ನು ಕಟ್ಟಲಾಗಿದೆ. ರಸ್ತೆ ಬದಿ ಗಿಡಗಳಿಗೆ ಗಿಡ ರಕ್ಷಕಗಳನ್ನು ಅಳವಡಿಸಲಾಗಿದೆ, ಮಂತ್ತು ಈಚಲ ಮರದ ಟೊಂಗೆಯನ್ನು ಕಟ್ಟಲಾಗಿದೆ.

ಶ್ರೀ ಚಂದ್ರಶೇಖರ ಮಾಮನಿ.—ಆಧ್ಯಕ್ಷರೇ 'ಅ' ಪ್ರಶ್ನೆಯಲ್ಲಿ ೧೯೮೪-೮೫ ಹಾಗೂ ೧೯೮೫-೮೬ನೇ ಸಾಲುಗಳಲ್ಲಿ ಸವದತ್ತಿ ತಾಲ್ಲೂಕಿನಲ್ಲಿ ೭ ಲಕ್ಷ ೩೦ ಸಾವಿರ ಸಸಿಗಳನ್ನು ನೆಡಲಾಗಿದೆ ಎಂದಿದ್ದಾರೆ. ಆದರೆ ಅಲ್ಲಿ ಪ್ರತ್ಯಕ್ಷವಾಗಿ ನೋಡಿದಾಗ ಅಷ್ಟು ಸಂಖ್ಯೆಗಳಲ್ಲಿ ನೆಟ್ಟಿಲ್ಲ. ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ? ಇನ್ನು ೧೬,೦೭,೨೯೪ ರೂಗಳಲ್ಲಿ ಅರಣ್ಯೀಕರಣ ಕೆಲಸಗಳನ್ನು ಮಾಡಿದ್ದಾರೆಂದಿದ್ದಾರೆ. ಆದರೆ ನಿಜವಾಗಿಯೂ ಅಲ್ಲಿ ಅಷ್ಟು ಕೆಲಸ ಆಗಿಲ್ಲ ಅಲ್ಲಿ. ಮತ್ತು ಅಲ್ಲಿನವರು ಅಧಿಕಾರ ದುರುಪಯೋಗ ಮಾಡಿ ಅಲ್ಲಿಗೆ ಬಂದ ಆಹಾರ ಧಾನ್ಯಗಳನ್ನು ಯಾರಿಗೆ ಕೊಡಬೇಕೋ ಅವರಿಗೆ ಕೊಡುತ್ತಿದ್ದಾರೆ ಅಲ್ಲಿನ ರೇಂಜ್ ಆಫೀಸ್‌ನಲ್ಲಿದ್ದ ಡೈಲಿ ವೇಜಸ್ ಸಿಬ್ಬಂದಿ ಒಬ್ಬನು ಅಲ್ಲಿಗೆ ಬಂದಿದ್ದು ಪಾಲಿಥಿನ್ ಬ್ಯಾಗ್ಸ್‌ನ್ನು ಹಾಗೂ ಟೈಪರೈಟರುಗಳನ್ನು ಅಕ್ರಮವಾಗಿ ಮಾರಾಟ ಮಾಡಿದ್ದಾನೆ. ಇವೆಲ್ಲವೂ ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜಿ. ಎಸ್. ದೇಶಮುಖ್.—ಇಲಾಖೆಯಿಂದ ಪೂರ್ಣ ವಿಚಾರಿಸಿರುವುದು ನಿಜ. ಕೆಲವು ಕಡೆ ಇನ್ನೂ ಕೆಲಸ ಪಡೆಯುತ್ತಿದೆ. ಇನ್ನು ನೀವು ಹೇಳಿದ ಡೈಲಿ ವೇಜಸ್ ವರ್ಕರ್ಸ್ ಬಗ್ಗೆ ನೀವು ಕಂಪ್ಲೇಂಟ್ ಅನ್ನು ನನಗೆ ಕೊಟ್ಟರೆ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಾಮನಿ.—ಉಳಿದಂತಹ ಗಿಡಗಳಿಗೆ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಅದನ್ನು ಸಂರಕ್ಷಣೆ ಮಾಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ. ಎಸ್. ದೇಶಮುಖ್.—ನೀರಿನ ವ್ಯವಸ್ಥೆ ಮಾಡಿದ್ದೇವೆ. ಒಂದು ಗಿಡಕ್ಕೆ ಪ್ರತಿ ವರ್ಷ ೨೧ ರೂಪಾಯಿ ಖರ್ಚು ಮಾಡುತ್ತಿದ್ದೇವೆ. ಎಲ್ಲಾ ಗಿಡಗಳಿಗೂ ಈ ವರ್ಷದಲ್ಲಿ ನೀರಿನ ವ್ಯವಸ್ಥೆ ಮಾಡುತ್ತೇವೆ.

ಕೊಡಗು ಜಿಲ್ಲೆಯಲ್ಲಿ ಗ್ರಾಮಾಂತರ ವಿದ್ಯುದೀಕರಣದ ಬಗ್ಗೆ

೭೭೦. (ಡಿ) ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ವಾಣಿಜ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೊಡಗಿನಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ? ಹಾಗೂ ಇನ್ನೂ ಎಷ್ಟು ಗ್ರಾಮಗಳಿಗೆ ಒದಗಿಸಬೇಕಾಗಿದೆ ?

(ಆ) ಈಗಾಗಲೇ ೨೨ ಗ್ರಾಮಗಳಿಗೆ (ಹ್ಯಾಮ್ಲೆಟ್ಸ್) ವಿದ್ಯುಚ್ಛಕ್ತಿ ಒದಗಿಸಬೇಕೆಂದು ವಿದ್ಯುತ್ ಮಂಡಳಿಗೆ ಶಿಫಾರಸ್ಸು ಮಾಡಿದ್ದಾಗ್ಯೂ ಈತನಕ ಮೇಲ್ಕಂಡ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಒದಗಿಸದಿರಲು ಕಾರಣವೇನು ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಮಂತ್ರಿಗಳು).—

(ಅ) ೩೧-೧೨-೮೬ರವರೆಗೆ ೨೮೬ ಗ್ರಾಮಗಳಿಗೆ ಒದಗಿಸಿದೆ. ೫ ಗ್ರಾಮಗಳಿಗೆ ಒದಗಿಸ ಬೇಕಾಗಿದೆ.

(ಆ) ಗ್ರಾಮಾಂತರ ವಿದ್ಯುದೀಕರಣದ ಶೇಕಡಾ ೧೦೦ರ ಗುರಿಯನ್ನು ೧೯೮೮-೮೯ರ ಒಳಗೆ ಸಾಧಿಸುವ ಉದ್ದೇಶವಿದೆ. ಇದಾದ ನಂತರ ಉಪ ಗ್ರಾಮಗಳ ವಿದ್ಯುದೀಕರಣವನ್ನು ತೀವ್ರಗೊಳಿಸ ಲಾಗುತ್ತದೆ.

ಶ್ರೀ ಡಿ. ಎ. ಚಿನ್ನಪ್ಪ.—ಕೊಡಗಿನಲ್ಲಿ ೨೮೬ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದೆ ಎಂದು ಹೇಳುತ್ತಿದ್ದೀರಿ ಆಲ್ಲಿರುವ ಪರಿಸ್ಥಿತಿ ಏನೆಂದರೆ ೧೦-೧೨ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿ

ಎಲ್ಲಾ ಮನೆಗಳಿಗೂ ಕೊಟ್ಟಿದೆಯೆಂದು ವರದಿಯನ್ನು ಕೊಡುತ್ತೀರಿ, ಆದರೆ ಎಲ್ಲಾ ಕಡೆಗಳಲ್ಲೂ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಸೆನ್ಸಸ್‌ನಲ್ಲಿ ಬಂದಿರತಕ್ಕಂತಹ ರೆವಿನ್ಯೂ ವಿಲೇಜ್ ಗ್ರಾಮಗಳೇನಿವೆ ಅದಕ್ಕೆ ಕನೆಕ್ಷನ್ ಕೊಡುತ್ತೇವೆ, ಎಷ್ಟು ಮನೆಗಳಿಗೆ ಎಂದು ಅಲ್ಲ, ಆ ಗ್ರಾಮಕ್ಕೆ ಕನೆಕ್ಷನ್ ಕೊಟ್ಟಿರುತ್ತಾರೆ, ಅಲ್ಲಿ ಬೀದಿ ದೀಪಗಳನ್ನು ಹಾಕಿರುತ್ತಾರೆ ಅದು ಎಷ್ಟು ಮನೆಗಳವರು ವಿದ್ಯುಚ್ಛಕ್ತಿ ಕನೆಕ್ಷನ್ ತೆಗೆದುಕೊಳ್ಳುತ್ತಾರೆಂಬುದನ್ನು ಅವಲಂಬಿಸುವುದಿಲ್ಲ. ಯಾವುದಾದರೂ ಗ್ರಾಮಂಗಳಿಗೆ ಕೊಡದೇ ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಕೊಡಗಿನಲ್ಲಿ ಪರಿಸ್ಥಿತಿ ಏನಿದೆಯೆಂದರೆ ಅಲ್ಲಿನ ಗ್ರಾಮಂಗಳಿಗೆ ರಸ್ತೆ ಇಲ್ಲ ಎರಡೂವರೆ ಕಿಲೋ ಮೀಟರ್‌ವರೆಗೆ ತೆಗೆದುಕೊಂಡು ಹೋಗಿ ಲೈಟ್ ಹಾಕಿ ಬಿಡುತ್ತೀರಿ ಆ ಗ್ರಾಮಂಗಳು ೧೦-೧೨ ಕಿಲೋಮೀಟರ್ ಒಳಗೆ ಹೋಗಿರುತ್ತದೆಇದರಿಂದಾಗಿ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಇದರ ವ್ಯವಸ್ಥೆಯನ್ನು ಬದಲಾವಣೆ ಮಾಡದಿದ್ದರೆ ಎಲ್ಲಾ ಕಡೆಗೂ ವಿದ್ಯುಚ್ಛಕ್ತಿಯನ್ನು ಒದಗಿಸಲು ಸಾಧ್ಯವಾಗುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲ್.—ಕೊಡಗಿನ ೨೯೧ ಗ್ರಾಮಗಳ ಪೈಕಿ ೨೮೬ ಗ್ರಾಮಂಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ಇನ್ನು ಉಳಿದ ಐದರ ಪೈಕಿ ಒಂದು ಗ್ರಾಮಂಕ್ಕೆ ಸೋಲಾರ್ ಸಿಸ್ಟಮ್ ಅನ್ನು ಅಳವಡಿಸಬೇಕೆಂಬ ಪ್ರಯತ್ನ ನಡೆದಿದೆ ಇನ್ನು ನಾಲ್ಕು ಗ್ರಾಮಂಗಳು ಉಳಿದಿದೆ. ಯಾವ ಗ್ರಾಮಂಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಲ್ಲ ಎಂಬ ಬಗ್ಗೆ ವಿವರಗಳನ್ನು ಕಳಿಸಿದರೆ ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ.—ಕಳಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಯ ಬಗ್ಗೆ

೬೪೬. ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾಮಿರ್ಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳ ಸಂಖ್ಯೆ ಎಷ್ಟು ?

(ಆ) ಅವುಗಳಲ್ಲಿ ನಷ್ಟದಲ್ಲಿರುವ ಕಾರ್ಖಾನೆಗಳು ಎಷ್ಟು ?

(ಇ) ಅವುಗಳನ್ನು ಸಂಧಾರಿಸಲು ಸರ್ಕಾರದವರು ಕೈಗೊಂಡ ಕ್ರಮಂಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿ ಮತ್ತು ಪದ್ಯುಚ್ಛಕ್ತಿ ಸಚಿವರು).—

(ಅ) ೨೮

(ಆ) ೧೪ ಕಾರ್ಖಾನೆಗಳು ನಷ್ಟದಲ್ಲಿವೆ.
೫ ಕಾರ್ಖಾನೆಗಳು ಸಧ್ಯದಲ್ಲಿ ಕೆಲಸ ಮಾಡುತ್ತಿಲ್ಲ.

(ಇ) ಘಟಕಗಳು ರೋಗ್ಯಸ್ಥವಾಗಲು ಕಾರಣವಾಗಳನ್ನು ಪರಿಶೀಲಿಸಲು ಹಾಗೂ ರೋಗಗ್ರಸ್ಥ ಘಟಕಗಳನ್ನು ಪುನಶ್ಚೇತನಗೊಳಿಸಲು ಕೈಗೊಳ್ಳಬೇಕಾದ ಪರಿಹಾರ ಕ್ರಮಂಗಳ ಬಗ್ಗೆ ಸಲಹೆ ನೀಡಲು ಸರ್ಕಾರವು ಒಂದು ಸಮಿತಿಯನ್ನು ರಚಿಸಿದೆ.

ಶ್ರೀ ಶಿವಾನಂದ ಕೌಜಲಗಿ.—ನಷ್ಟದಲ್ಲಿರುವ ಕಾರ್ಖಾನೆಗಳು ೧೪ ಮತ್ತು ಐದು ಕಾರ್ಖಾನೆಗಳು ಕೆಲಸ ಮಾಡುತ್ತಿಲ್ಲವೆಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ. ಅವುಗಳನ್ನು ಪ್ರಾರಂಭಿಸಲು ಯಾವ ಕ್ರಮ ಕೈಗೊಂಡಿದ್ದೀರಿ ಹಾಗೂ ನಷ್ಟದಲ್ಲಿರುವ ಕಾರ್ಖಾನೆಯ ಮೇಲೆ ಸರಕಾರ ಯಾವ ಕ್ರಮ ಕೈಗೊಂಡಿದೆಯೆಂಬುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಒಟ್ಟು ೨೮ ಸಕ್ಕರೆ ಕಾರ್ಖಾನೆಗಳಿದ್ದು ಅವುಗಳ ಪೈಕಿ ೧೪ ನಷ್ಟದಲ್ಲಿವೆ ಹಾಗೂ ಐದು ಕಾರ್ಖಾನೆಗಳು ಕ್ಲೋಸ್ ಆಗಿದೆ. ೯ ಕಾರ್ಖಾನೆಗಳು ಲಾಭದಲ್ಲಿದೆ. ವಿವರವನ್ನು ಮಾನ್ಯ ಸದಸ್ಯರಿಗೆ ಒದಗಿಸಿ ಕೊಡುತ್ತೇನೆ.